ಶ್ರೀ ಮ ದ್ ಜ ಯ ತೀ ರ್ಥ ಗು ರು ಭ್ಯೋ ನ ಮಃ

Contributed by Sri B.Ramanatha Bangaloare-11
www.vijayadasaru.net Team Member

ಚಿತ್ರೈಃ ಪದೈಶ್ಚ ಗಂಭೀರೈಃ ವಾಕ್ಯೈರ್ಮಾನೈರಖಂಡಿತೈಃ ।
ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥವಾಕ್ ॥

ವ್ಯಾಕರಣಾದಿಸಂಸ್ಕಾರಯುಕ್ತವಾದ ಪದಗಳಿಂದಲೂ, ಆಳವಾದ ಅರ್ಥವುಳ್ಳ ವಾಕ್ಯಗಳಿಂದಲೂ ಪರವಾದಿಗಳಿಂದ ಖಂಡಿಸಲಶಕ್ಯವಾದ ಪ್ರತ್ಯಕ್ಷಾದಿ ಪ್ರಮಾಣಗಳಿಂದಲೂ (ಕೂಡಿದ) ಮತ್ತು ಗುರುಗಳಾದ ಶ್ರೀ ಮದಾಚಾರ್ಯರ ಹೃದಯವನ್ನು ಚೆನ್ನಾಗಿ ಪ್ರಕಟಮಾಡುವ ಶ್ರೀಜಯತೀರ್ಥಮಚ್ಚರಣರ ಮಾತು ಶೋಭಿಸುತ್ತದೆ.

ಯಸ್ಯ ವಾಕ್ಕಾಮಧೇನುರ್ನಃ ಕಾಮಿತಾರ್ಥಾನ್ ಪ್ರಯಚ್ಛತಿ ।
ಸೇವೇ ತಂ ಜಯಯೋಗೀಂದ್ರಂ ಕಾಮಬಾಣಚ್ಛಿದಂ ಸದಾ ॥

ಕಾಮಧೇನುವಿನಂತೆ ನಮಗೆ ಅಭೀಷ್ಟಗಳನ್ನು ಪೂರೈಸುವ ಸದ್ವಾಕ್ಯಜಾಲಗಳುಳ್ಳ ಕಾಮಬಾಣಗಳನ್ನು ಗೆದ್ದ ಶ್ರೀಮಜ್ಜಯತೀರ್ಥ ಗುರುಗಳನ್ನು ಸೇವಿಸುತ್ತೇನೆ.

(ಆ ರಾ ಧ ನೆ : ಆ ಷಾ ಢ ಮಾ ಸ ಕೃ ಷ್ಣ ಪ ಕ್ಷ ಪ ಂ ಚ ಮಿ)

ರಾ ಗ – ಶ ಂ ಕ ರಾ ಭ ರ ಣ : ತಾ ಳ – ಅ ಟ ತಾ ಳ

ಸಾರಿ ಭಜಿಸಿರೊ ಟೀಕಾರಾಯರಂಘ್ರಿಯ ।
ಘೋರಪಾತಕಾಂಬುಧಿಯ ಪಾರಮಾಳ್ಪರ ।ಪ।

ಮೋದತೀರ್ಥರ ಮತವ ಸಾಧಿಸುವರ ।
ಪಾದಸೇವ್ಯರ ದುರ್ಬೋಧ ಕಳೆವರ ।೧।

ಭಾಷ್ಯತತ್ವವ ವಿಸ್ತಾರ ಮಾಳ್ಪರ ।
ದೋಷದೂರರ ಆದಿಶೇಷಾವೇಶರ ।೨।

ಕಾಮಗೆದ್ದರ  ಹರಿಗೆ  ಪ್ರೇಮಪೂರ್ಣರ ।
ನೇಮನಿತ್ಯರ  ನಿಷ್ಕಾಮನಾಪರ  । ೩ ।

ಮೋಕ್ಷದಾತರ  ಅಕ್ಷೋಭ್ಯತೀರ್ಥರ ।
ಸಾಕ್ಷಿಲಿಪ್ಪರ  ಅಪೇಕ್ಷರಹಿತರ  । ೪ ।

ವಿಜಯವಿಟ್ಠಲನ  ಅಂಘ್ರಿ  ಭಜನೆ  ಮಾಳ್ಪರ
ಕುಜನಭಂಜರ  ದಿಗ್ವಿಜಯರಾಯರ  । ೫ ।

## ರಾ ಗ – ಆ ನ ಂ ದ ಭೈ ರ ವಿ : ತಾ ಳ – ಮಿ ಶ್ರ ಛಾ ಪು ತಾ ಳ

ಟೀಕಾಚಾರ್ಯರ  ಪಾದಸೋಕಿದ  ಕೊನೆಧೂಳಿ ।
ತಾಕಿದ  ಮನುಜರಿಗೆ  । ಪ ।

ಕಾಕುಗೊಳಿಸುವ  ಅನೇಕ  ಪಾಪಂಗಳ ।  ನೂಕಿ  ಬಿಸಾಡಲು
ಸಾಕಾರ  ಉಳ್ಳಂಥ  । ಅ ಪ ।

ಮಧ್ವಮತವೆಂಬೊ  ದುಗ್ಧಾಬ್ಧಿಯೊಳು
ಉದ್ಭವಿಸಿದ  ಚಂದ್ರನೊ
ಅದ್ವೈತಮತವನಭೇದನ  ಕುಠಾರ
ವಿದ್ಯಾರಣ್ಯನ  ಗರ್ವಕ್ಕೆ  ಪರಿಹಾರ  । ೧ ।

ತತ್ವವಾರಿಧಿಸಾರ  ತತ್ವಸುಧಾಭಾಷ್ಯ
ವಿಸ್ತಾರವಾಗಿರಲು
ಚಿತ್ತವಿಟ್ಟು  ಮಾಡಿ  ಟೀಕಾವನ್ನು
ಸುತ್ತೇಳು  ಜಗಕೆಲ್ಲ  ಪ್ರಕಟಿಸಿ  ಮೆರೆದಂಥ  । ೨ ।
ಎಂದಿಗಾದರು  ಒಮ್ಮೆ  ಕೊನೆ  ನಾಲಿಗೆಯಿಂದ
ಬಿಂದು  ಮಾತ್ರದಿ  ನೆನೆಯೆ
ಮಂದಮತಿಗಾದರು  ಅಜ್ಞಾನ  ನಾಶನ

ಸಂದೇಹವಿಲ್ಲವಯ್ಯ ಸ್ಮರಣೆ ಮಾಡಿದ ಮೇಲೆ ।೩।

ಜ ಎಂದು ನುಡಿಯಲು ಜಯಶೀಲನಾಗುವ
ಯ ಎಂದು ನುಡಿಯಲು ಯಮನಂಜುವ
ತೀ ಎಂದು ನುಡಿಯಲು ತಿಮಿರ ಪಾತಕ ಹಾನಿ
ರ್ಥ ಎಂದು ನುಡಿದರೆ ತಾಪತ್ರಯ ಪರಿಹಾರ ।೪।

ಯೋಗಿ ಅಕ್ಷೋಭ್ಯರ ಕರಕಮಲ ಸಂಜಾತ
ಭಾಗವತರ ಪ್ರಿಯನೆ
ಕಾಗಿಣಿ ತೀರದ ಮಳಖೇಡ ನಿವಾಸ
ಶ್ರೀಗುರು ವಿಜಯವಿಟ್ಠಲನ ಸೇವಕದಾಸ

## ರಾಗ – ಕಲ್ಯಾಣಿ ಬೇಹಾಗ್ : ತಾಳ – ಅಟತಾಳ

ಜಯರಾಯರ ನೋಡಿರೋ ಸಜ್ಜನರೆಲ್ಲ
ಜಯರಾಯರ ಪಾಡಿರೋ ।ಪ।

ಜಯರಾಯರ ನೋಡಿ ಜಪಿಸಿ ಮನದಿ ಪಾಡಿ
ಜಯವಾಗುವುದು ನಿಮಗೆ ಭಯನಾಶ ಸತತ ।ಅ ಪ।

ದುರಳಮತವೆಂಬೊ ಕರಿಗೆ ಅಂಕುಶವಿತ್ತು
ಸರಸಾದ ಗ್ರಂಥ ಆನಂದಮುನಿ
ವಿರಚಿಸಿ ಇರಲಾಗಿ ಪರಮಭಕ್ತಿಯಿಂದ
ವಿಸ್ತರ ಮಾಡಿದಾ ಕರದ ಕನ್ನಡಿಯಂತೆ ।೧।
ವಾದಿಗಳನೆಲ್ಲ ಜಯಿಸಿ ಡಂಗುರ ಹೊಯ್ಸಿ
ಭೇದಾರ್ಥಜ್ಞಾನ ಸತ್ಯವೆನಿಸಿ
ಈ ಧರೆಯೊಳು ಹರಿಯೇ ಪರದೈವವೆಂದು
ಸಾಧಿಸಿ ಮೆರೆದ ಉದ್ದಂಡನಾದ ಗುರುತಿಲಕ ।೨।
ಅಕ್ಷೋಭ್ಯತೀರ್ಥರ ಕರದಿಂದ ಜನಿಸಿ

ಮೋಕ್ಷಕೆ ಜಯಪತ್ರಿಕೆ ಕೊಡಿಸಿ
ಪಕ್ಷಿವಾಹನ ಸಿರಿವಿಜಯವಿಟ್ಠಲನ್ನ
ಈಕ್ಷಿಸುವುದಕುಪದೇಶ ಕೊಡುವ ಋಷಿ ।೩।

ರಾಗ - ಆನಂದಭೈರವಿ : ತಾಳ :ಆದಿತಾಳ

ಎದುರಾರೈ ಗುರುವೆ ಸಮರಾರೈ ।ಪ।

ಮದನ ಗೋಪಾಲನ ಪ್ರಿಯ ಜಯರಾಯ ।ಅ ಪ।

ಕಡುಗರ್ಜಿಸುವ ಕೇಸರಿಯಂತೆ ನಿಮ್ಮ ವಾದ
ಗಡಣೆಯ ಕೇಳುತ ನುಡಿ ಮುಂದೋಡದೆ
ಗಡಗಡ ನಡುಗುತ ಮಾಯ್ಗೋಮಾಯ್ಗಳು
ಅಡವಿಯೊಳಡಗೋರು ನಿಮ್ಮ ಭೀತಿಯಲಿ ।೧।

ಕುಟಿಲ ಮತಗಳೆಂಬೊ ಚಟುಲಂಧಕಾರಕ್ಕೆ
ಪಟುತರ ತತ್ವಪ್ರಕಾಶಿಕೆಯೆಂತೆಂಬ
ಚಟುಲತಾಪದಿಂದ ಖಂಡಿಸಿ ತೇಜೋ
ತ್ಕಟದಿ ಮೆರೆದ ಬುಧಕಟಕಾಬ್ಜ ಮಿತ್ರ ।೨।

ಅಮಿತ ದ್ವಿಜಾವಳಿ ಕುಮುದಗಳರಳಿಸಿ
ವಿಮತರ ಮುಖಕಮಲಂಗಳ ಬಾಡಿಸಿ

ಸ್ವಮತರ ಹೃತ್ಸಂತಾಪಗಳೋಡಿಸಿ
ವಿಮಲ ಸುಕೀರ್ತಿಯ ಪಡೆದೆಯೋ ಚಂದ್ರ ।೩।

ವೇದಶಾಸ್ತ್ರಗಳೆಂಬೊ ಶೃಂಗಗಳಿಂದ ಸು-
ಧಾದಿ ಗ್ರಂಥಗಳೆಂಬೊ ಸ್ತನದಿಂದೊಪ್ಪುತ ತತ್ವ-

ಬೋಧನೆಯೆಂಬ ದುಗ್ಧ ಶಿಷ್ಯವತ್ಸಂಗಳಿಗೆ
ಆದರದಲಿ ಕೊಟ್ಟ ಯತಿಸುರಧೇನು ।೪।

ವ್ಯಾಸಸೂತ್ರಗಳೆಂಬ ಮಂದರವನು ವೇದ
ರಾಶಿಯೆಂಬ ವಾರಾಶಿಯೊಳಿಟ್ಟು
ಶ್ರೀ ಸರ್ವಜ್ಞರ ವಾಕ್ಯಪಾಶದಿ ಸುತ್ತಿ
ಭಾಸುರ ನ್ಯಾಯಸುಧಾ ಪಡೆದ ಯತೀಂದ್ರ ।೫।

ವನಜನಾಭನ ಗುಣಮಣಿಗಳು ಸರ್ವಜ್ಞ-
ಮುನಿಕೃತ ಗ್ರಂಥಗಳವನಿಯೊಳಗಡೆ ಸ-
ಜ್ಜನರಿಗೆ ಟೀಕಾಂಜನದಿಂದ ತೋರಿಸಿ
ಘನ ಸುಖಸಾಧನ ಮಾಡಿದ್ಯೋ ಧೀರ ।೬।
ಅರ್ಥಿಮಂದಾರ ವೇದಾರ್ಥವಿಚಾರ ಸ-
ಮರ್ಥ ಶ್ರೀಕೃಷ್ಣ ಪಾದಾಂಬುಜಲೋಲ ಪ್ರ-
ತ್ಯರ್ಥಿ ಮತ್ತೇಭಕಂಠೀರವಕ್ಷೋಭ್ಯ-
ತೀರ್ಥ ಕರಜ ಜಯತೀರ್ಥ ಯತೀಂದ್ರ ।೭।

|| Sri Krishnarpanamasthu||